**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 91/2023**

| | | | |
|---|---|---|---|
| **ಹೆಸರು** | **:** | **ಶ್ರೀದೇವಿ ಕೊಳ್ಳಿ** | **ಚಾಸಾ. 1** |
| **ಗಂಡನ ಹೆಸರು** | **:** | **ಭೀಮನ ಗೌಡ** | **ಪ್ರಾ.ಸಾ. 4** |
| **ವಯಸ್ಸು** | **:** | **32 ವರ್ಷ** | **ದಿನಾಂಕಃ 08-09-2025** |
| **ಉದ್ಯೋಗ** | **:** | **ಅಬಕಾರಿ ನಿರೀಕ್ಷಕರು** | |
| **ವಾಸಸ್ಥಳ** | **:** | **ಗದಗ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕಃ05-07-2019 ರಿಂದ 10-01-2025 ರವರೆಗೆ ಅಬಕಾರಿ ಉಪನಿರೀಕ್ಷಕರಾಗಿ ಚಿತ್ತಾಪುರದಲ್ಲಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕಃ 23-02-2022 ರಂದು ಮಧ್ಯಾಹ್ನ 2 ಗಂಟೆ ಸುಮಾರಿಗೆ ನಾನು, ಚಾಸಾ-5 ಮತ್ತು ಚಾಸಾ-4 ರವರು ಚಿಂಚೋಳಿ ಪಟ್ಟಣದ ಗಸ್ತು ಕರ್ತವ್ಯದಲ್ಲಿ ಇರುವಾಗ ನನಗೆ ಚಿಂಚೋಳಿ ಪಟ್ಟಣದ ಚಂದಾಪುರ ಗ್ರಾಮದಲ್ಲಿ ಅಕ್ರಮವಾಗಿ ಸೆಂಧಿ ಮಾರಾಟದ ಬಗ್ಗೆ ಬಾತ್ಮಿ ಬಂದಿದ್ದು ಅದನ್ನು ಚಾಸಾ-4 ಮತ್ತು 5ರವರಿಗೆ ತಿಳಿಸಿ ಆಗ ನಾವು ಚಿಂಚೋಳಿಯ ಗಾಂಧಿ ವೃತ್ತದಿಂದ ಪಂಚರಾದ ಚಾಸಾ-2 ಮತ್ತು 3 ರವರನ್ನು ಕರೆಸಿ ಅವರಿಗೆ ಭಾತ್ಮಿ ಬಗ್ಗೆ ತಿಳಿಸಿ ಅವರು ಪಂಚರಾಗಲು ಒಪ್ಪಿ ಕೊಂಡ ಮೇರೆಗೆ ನಾನು, ಸಿಬ್ಬಂದಿಯಾದ ಚಾಸಾ-4 ಮತ್ತು 5ರವರು ಹಾಗೂ ಪಂಚರು ಸೇರಿ ಭಾತ್ಮಿ ಸ್ಥಳಕ್ಕೆ ಹೊರಟು ಮಧ್ಯಾಹ್ನ 2-15 ಗಂಟೆ ಸುಮಾರಿಗೆ ಭಾತ್ಮಿ ಸ್ಥಳಕ್ಕೆ ತಲುಪಿರುತ್ತೇವೆ. ಆಗ ನಮ್ಮನ್ನು ನೋಡಿ ನ್ಯಾಯಾಲಯದ ಮುಂದೆ ಇರುವ ಆರೋಪಿತಳು ತನ್ನ ಮನೆಯಿಂದ ಓಡಿ ಹೋಗಿರುತ್ತಾಳೆ. ಆಗ ನಾವು ಸ್ಥಳದಲ್ಲಿ ಇದ್ದ ವ್ಯಕ್ತಿಗಳಿಗೆ ಪಂಚರಾಗಲು ಕೇಳಿದಾಗ ಅವರು ಸಹಕರಿಸದೇ ಇರುವ ಕಾರಣ ನಮ್ಮ ಜೊತೆ ಬಂದ ಚಾಸಾ-2 ಮತ್ತು 3 ರವರ ಸಮಕ್ಷಮ ಚಾಸಾ-1ರವರು ಶೋಧನ ಸಮುಚಿತ ಪತ್ರವನ್ನು ತಯಾರಿಸಿ ಸದರಿ ಮನೆಯನ್ನ ಶೋಧನೆ ಮಾಡಿದಾಗ ಅಲ್ಲಿ 20 ಲೀಟರ ಸಾಮರ್ಥದ 2 ಬಿಳಿ ಬಣ್ಣದ ಪ್ಲಾಸ್ಟಿಕ ಬಕೇಟನಲ್ಲಿ ಅಂದಾಜು 40 ಲೀಟರ ಕಲಬೇರಿಕೇ ಸೆಂಧಿ ದೋರೆತಿದ್ದು ಅದನ್ನು ಪಂಚರ ಸಮಕ್ಷಮ ಚಾಸಾ-1ರವರು ಜಪ್ತಿ ಮಾಡಿ ಅದರಲ್ಲಿ ರಾಸಾಯನಿಕ ಪರೀಕ್ಷೆಗಾಗಿ 1 ಲೀಟರ ಬಾಟಲಿನಲ್ಲಿ ಪ್ರತ್ಯಕೆವಾಗಿ ಜಪ್ತಿ ಮಾಡಿಕೊಂಡು ಮಧ್ಯಾಹ್ನ 2.30 ರಿಂದ 3.30ರವರೆಗೆ ಪಂಚನಾಮೆ ಜರುಗಿಸಿ ಚಿಂಚೋಳಿಯ ಅಬಕಾರಿಯ ಕಛೇರಿಗೆ ಬಂದು ಮುಂದಿನ ಕ್ರಮಕ್ಕಾಗಿ ಒಪ್ಪಿಸಿರುತ್ತಾನೆ.

ಈಗ ನೋಡುತ್ತಿರುವ ಒಂದು ಖಾಲಿ ಬಾಟಲನ್ನು ಸಾಕ್ಷಿ ನೋಡಿ ಇದರಲ್ಲಿ ರಾಸಾಯನಿಕ ಪರೀಕ್ಷೆಗಾಗಿ

ಕಲಬೇರಿಕೆ ಸೇಂಧಿಯನ್ನು ಜಪ್ತಿ ಮಾಡಲಾಗಿತ್ತು ಎಂದು ನುಡಿಯುತ್ತಾರೆ. ಸದರಿ ಖಾಲಿ ಬಾಟಲಿಯನ್ನ ಈಗಾಗಲೇ ಮು.ಮಾ-1 ಎಂದು ಗುರುತಿಸಲಾಗಿದೆ.

ಆ ದಿನ ತಯಾರಿಸಿದ ಶೋಧನಾ ಸಮುಚ್ಚಿತ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-3 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ನಿಪಿ-1ರ ಪಂಚನಾಮೆ ನಾನೇ ಜರುಗಿಸಿದ್ದು ಮತ್ತು ಅದರಲ್ಲಿ ನನ್ನ ಸಹಿ ಇದೆ. ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ನಿಪಿ-2ರ ಮಾದರಿ ಸೀಲ್ ಪತ್ರ ನಾನೇ ತಯಾರಿಸಿದ್ದು ಮತ್ತು ಅದರಲ್ಲಿ ನನ್ನ ಸಹಿ ಇದೆ. ಅದರಲ್ಲಿರುವ ನನ್ನ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದೂರು ನಾನೇ ಸಲ್ಲಿಸಿದ್ದು ಮತ್ತು ಅದರಲ್ಲಿ ನನ್ನ ಸಹಿ ಇದೆ. ಸದರಿ ದೂರನ್ನು ನಿಪಿ-4 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಪ್ರ.ವ.ವರದಿಯನ್ನು ನಾನೇ ದಾಖಲಿಸಿದ್ದು ಮತ್ತು ಅದರಲ್ಲಿ ನನ್ನ ಸಹಿ ಇದೆ. ಸದರಿ ಪ್ರ.ವ.ವರದಿಯನ್ನು ನಿಪಿ-5 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-7ರವರಿಗೆ ಸಲ್ಲಿಸಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ SKK ವಕೀಲರಿಂದಃ**

ದಾಳಿ ಮಾಡಿರುವ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಂದಾಪುರದಲ್ಲಿ ಯಾವುದೇ ವೆಂಕಟೇಶ ನಗರ ಇಲ್ಲ ಎಂದರೆ ಸರಿಯಲ್ಲ. ಆರೋಪಿಯ ಮನೆ ಚಂದಾಪುರದಲ್ಲಿ ಇಲ್ಲ ಎಂದರೆ ಸರಿಯಲ್ಲ. ಆರೋಪಿ ಗಂಗನಪಳ್ಳಿಯಲ್ಲಿ ವಾಸವಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಂಕೆ ಸಂಖ್ಯೆಗೊಸ್ಕರ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ .**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**